Road from Ajjampur-Hosadurga To Asandi Village.

Q.—796. Sri Y. M. CHANDRASEKHARIAH (Kadur).—

Will the Government be pleased to state :—

(*a*) whether an estimate has been prepared to construct a road and bridge from Ajjampur-Hosadurga road to Asandi village, Hirenallur Hobli in Kadur Taluk ;

(*b*) if so, the estimated cost ;

(*c*) whether the same has been received by them for sanction ;

(*d*) the steps taken by them in respect of the said road and bridge ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) Rs. 76,200.

(*c*) No.

(*d*) The estimate is being scrutinised.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—76,200 ರೂಪಾಯಿಗಳ ರಸ್ತೆ ಅಂದಾಜಾಗಿ ಎಷ್ಟು ವರ್ಷವಾಯಿತು ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸಿ ಹೇಳುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅಂದಾಜಾಗಿ ಸುಮಾರು ಮೂರುವರ್ಷಗಳಾದರೂ ಸಹ ಕೆಲಸ ಕೈಕೊಳ್ಳದಿರುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು, ಗೊತ್ತಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ರಸ್ತೆ ಸಂಸ್ಥಾನದಲ್ಲಿ ಬಹಳ ಪ್ರಾಮುಖ್ಯವಾದುದು, ಅನೇಕ ಗ್ರಾಮಗಳಿಗೆ ಅನುಕೂಲವಾಗತಕ್ಕುದು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ರೆವೆನ್ಯೂ ಮಂತ್ರಿಗಳು ಆ ಕಡೆ ಪ್ರವಾಸಬಂದಾಗ ಅವರಲ್ಲಿ ನಿಯೋಗ ಬಂದು ಮನವಿ ಮಾಡಿಕೊಂಡಿರಲಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು ; ಹಣಕಾಸಿನ ಅಭಾವದಿಂದ ಕೆಲವು ರಸ್ತೆಗಳನ್ನು ನಿರ್ಮಾಣಮಾಡಲು ಸಾಧ್ಯವಾಗಲಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗಲಾದರೂ ಮುಖ್ಯವಾದ ಈ ರಸ್ತೆಯನ್ನು ಮಂಜೂರು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಎಗ್ಜಿಕ್ಯೂಟಿವ್ ಇಂಜಿನಿಯರಿಗೆ ಫೈನಲ್ ಎಸ್ಟಿಮೇಟ್ ಕಳುಹಿಸಿ ಎಂದು ಹೇಳಿದೆ.

Tanks in Belur, Alur, and Saklespur Taluks.

Q.—651. Sri B. N. BORANNA GOWDA (Belur).—

Will the Government be pleased to state :—

(*a*) the number of tank works pending incompletion for the last four years in Belur, Alur and Saklespur Taluks ;

(*b*) the reason for the incompletion of these works ;

(*c*) the time required for the completion of these works ?

A.—Sri A. G. RAMACHANDRA RAO (Minister for Law and Education).—

(*a*) Belur Taluk ... 9
Alur Taluk ... 1
Saklespur Taluk ... Nil.

(*b*) These works are situated in the interior where it is difficult to procure labour and materials.

(*c*) They are expected to be completed by the end of the official year 1956-57.

ಶ್ರೀ ಬಿ. ಎಕ್. ಬೋರಣ್ಣಗೌಡ.—ಉತ್ತರದಲ್ಲಿ ಬೇಲೂರು ತಾಲ್ಲೂಕಿನ 9 ಕೆರೆ ಕಾಮಗಾರಿ ಪೂರ್ತಿಯಾಗಿಲ್ಲವೆಂದು ಹೇಳಿರುವುದು ಸರಿಯೆ ಎಂಬುದನ್ನು ಎಗ್ಜಿಕ್ಯೂಟಿವ್ ಇಂಜಿನಿಯರಿಂದ ವೆರಿಫೈ ಮಾಡಿಸಿ ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಗತ್ಯ ಕಂಡರೆ ಮಾಡುತ್ತೇವೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಕೆರೆಗಳ ಕಾಮಗಾರಿಗಾಗಿ 8 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.— ಬಂದಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಉತ್ತರದಲ್ಲಿ ಕೊಟ್ಟಿರುವ ಸಂಖ್ಯೆ ಸರಿಯಲ್ಲ, 30—40 ಕೆರೆಗಳ ಕಾಂಗಾರಿ ಯಾಗದೆ ರೈತರಿಗೆ ತೊಂದರೆಯಾಗಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟು ಕೆರೆ ಕೆಲಸ ಪೂರೈಸಿಲ್ಲವೆಂದು ಪ್ರಶ್ನೆ ಕೇಳಿದ್ದರಿಂದ ಅದಕ್ಕೆ ಮಾತ್ರ ಜವಾಬುಕೊಟ್ಟಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಪೂರೈಸಿಲ್ಲದಿರುವುದನ್ನೇ ನಾನು ಕೇಳುತ್ತಿರುವುದು.

ಶ್ರೀ ಎ. ಜಿ. ರಾಮಚಂದ್ರರಾವ್.—ಪೂರೈಸಿಲ್ಲವೆಂದು ಉತ್ತರದಲ್ಲಿ ಹೇಳಿರುವುದನ್ನು ಈ ವರ್ಷ ಪೂರೈಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಎಷ್ಟು ಕೆರೆ ಕೆಲಸ ಪೂರ್ಣವಾಗಿಲ್ಲವೆಂಬುದಕ್ಕೆ ಇಲ್ಲಿ ಕೊಟ್ಟಿರುವ ಉತ್ತರ ಸರಿಯಾಗಿಲ್ಲ. ಸರಿಯಾದ ಉತ್ತರ ತರಿಸಿಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರಿಯಾಗಿಲ್ಲವೆಂದು ಹೇಳಿದರೆ ವೆರಿಫೈ ಮಾಡುತ್ತೇವೆ.